# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ

ಸಂಪುಟ : 38 ಸಂಚಿಕೆ : 7 ದುರ್ಮುಖಿ–ಕಾರ್ತಿಕ ಕಲಿಯುಗಾಬ್ದ 5118 15–11–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4




ಟಿಪ್ಪು ಜಯಂತಿ ವಿರೋಧಿಸಿ
ಚಿತ್ರದುರ್ಗದಲ್ಲಿ ಒನಕೆ ಹಿಡಿದು ಪ್ರತಿಭಟನೆ

# ಆಂತರಿಕ ಭದ್ರತೆಗೆ ಜಿಹಾದಿಗಳ ಸವಾಲು

## ಹಿಂದೂ ಸಂಘಟನೆಯ ಕಾರ್ಯಕರ್ತರ ಹತ್ಯೆ; ಪೊಲೀಸ್ ತನಿಖೆಗಳಿಂದ ಜಿಹಾದಿ ನಂಟು ಬಹಿರಂಗ

ರಾಜ್ಯದಲ್ಲಿ ಕಳೆದ ಇಪ್ಪತ್ತೊಂದು ತಿಂಗಳುಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್) ಮತ್ತು ಪರಿವಾರ ಸಂಘಟನೆಗಳಿಗೆ ಸೇರಿದ ಎಂಟು ಮಂದಿಯ ಹತ್ಯೆಯಾಗಿದೆ. 2015ರ ಫೆಬ್ರುವರಿ 19ರಂದು ಶಿವಮೊಗ್ಗದಲ್ಲಿ ಚೂರಿ ಇರಿತಕ್ಕೆ ಬಲಿಯಾದ ವಿಶ್ವನಾಥ, 2015 ನವಂಬರ 10ರಂದು ಟಿಪ್ಪು ಜಯಂತಿ ಮೆರವಣಿಗೆಯ ದೊಂಬಿಯಲ್ಲಿ ಹಲ್ಲೆಗೀಡಾಗಿ ಮೃತರಾದ ಕೊಡಗಿನ ವಿಶ್ವ ಹಿಂದು ಪರಿಷತ್‌ನ ಸಂಘಟನಾ ಕಾರ್ಯದರ್ಶಿ ಕುಟ್ಟಪ್ಪ, 2016ರ ಅಕ್ಟೋಬರ್ 16ರಂದು ವಿಜದಶಮಿಯ ಪಥಸಂಚಲ ಮುಗಿಸಿ ಮನೆಗೆ ಹೊರಟಿದ್ದಾಗ ಸಂಘದ ಗಣವೇಶದಲ್ಲೇ ಕೊಲೆಯಾದ ಬೆಂಗಳೂರಿನ ಶಿವಾಜಿನಗರದ ರುದ್ರೇಶ್ ಹಾಗೂ ಮೂಡುಬಿದಿರೆಯ ಬಜರಂಗದಳ ಕಾರ್ಯಕರ್ತ ಪ್ರಶಾಂತ ಪೂಜಾರಿ, ಮೈಸೂರಿನ ಉದಯಗಿರಿ ಬಡಾವಣೆಯಲ್ಲಿ ಹತ್ಯೆಗೀಡಾದ ಬಿಜೆಪಿಯ ಕ್ಯಾತಮಾರನಹಳ್ಳಿ ರಾಜು, ಕುಶಾಲನಗರದ ಪ್ರವೀಣ ಪೂಜಾರಿ, ಮಂಗಳೂರಿನ ಆರೆಸ್ಸೆಸ್ ಕಾರ್ಯಕರ್ತ ಕಾರ್ತಿಕ ರಾಜ್, ಮೈಸೂರಿನ ಬಿಜೆಪಿ ಮುಖಂಡ ಮಾಗಳಿ ರವಿ ಈ ಎಲ್ಲ ಹತ್ಯೆಗಳ ಹಿಂದೆ ಒಂದೇ ಸಂಘಟನೆಗೆ ಸೇರಿದ ಜನರ ಹೆಸರು ಬಲವಾಗಿ ಕೇಳಿಬರುತ್ತಿದೆ. ಜೊತೆಗ ಹಲವಾರು ಬಾರಿ ಸಂಘದ ಕಾರ್ಯಕರ್ತರ ಮೇಲೆ ಮಾರಣಾಂತಿಕ ಹಲ್ಲೆಗಳೂ ನಡೆದಿವೆ. ಬೆಂಗಳೂರಿನ ರುದ್ರೇಶ್ ಹತ್ಯೆಯಲ್ಲಿ ಬಂಧಿತರಾದ ಐವರು ಪ್ರಮುಖ ಆರೋಪಿಗಳಾದ ವಾಸೀಂ ಅಹ್ಮದ್, ಮುಜೀಬ್, ಮೊಹಮದ್ ಮಜರ್ ಮತ್ತು ಇರ್ಫಾನ್ ಪಾಷಾ ವಿಚಾರಣಾ ಸಂದರ್ಭದಲ್ಲಿ ಪೊಲೀಸರಿಗೆ ನೀಡಿದ ಮಾಹಿತಿಯಿಂದ ಸಂಘಪರಿವಾರದ ಕಾರ್ಯಕರ್ತರ ಹತ್ಯೆಯ ವ್ಯವಸ್ಥಿತ ಸಂಚು ಮತ್ತು ಇವೆಲ್ಲದರೊಡನೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಅಥವಾ ಪಿಎಫ್ಐ ಹೆಸರಿನ ಈ ಸಂಘಟನೆಯೊಂದಿಗಿನ ನಂಟು ದೃಢಗೊಂಡಿದೆ. ರುದ್ರೇಶ್ ಹತ್ಯೆಯನ್ನು ಕಾರ್ಯಗತಗೊಳಿಸಿದ ಈ ನಾಲ್ವರು ಪಿಎಫ್ಐ ಮತ್ತು ಎಸ್‌ಡಿಪಿಐನ ಸದಸ್ಯರಾಗಿದ್ದಲ್ಲದೇ ಇವರಿಗೆ ಸೂಚನೆ ನೀಡಿದ ಪಿಎಫ್ಐ ಸಂಘಟನೆಯ ಬೆಂಗಳೂರು ಜಿಲ್ಲಾಧ್ಯಕ್ಷ ಅಸೀಂ ಷರೀಫ್ ಕೂಡ ಬಂಧನಕ್ಕೊಳಗಾಗಿದ್ದಾನೆ. ಈ ಹಿಂದೆ ಮೂಡುಬಿದಿರೆಯ ಪ್ರಶಾಂತ ಪೂಜಾರಿ ಹತ್ಯೆಯಲ್ಲಿ ಬಂಧಿತರಾದ ಏಳು ಜನರೂ ಪಿಎಫ್ಐ ಸದಸ್ಯರಾಗಿದ್ದರು, ಅವರಲ್ಲೊಬ್ಬ ವಲಯ ಅಧ್ಯಕ್ಷನೂ ಸೇರಿದ್ದ. ಕುಟ್ಟಪ್ಪ ಹತ್ಯೆ, ರಾಜು ಹತ್ಯೆಯ ಆರೋಪಿಗಳಿಗೂ, ಅನೇಕ ಬಾರಿ ಸಂಘದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದವರಿಗೂ ಪಿಎಫ್ಐ ನಂಟಿರುವುದು ಪೊಲೀಸ್ ತನಿಖೆಯಿಂದ ಬಿಚ್ಚಿಕೊಳ್ಳುತ್ತಿದೆ. ಹಾಗೆಯೇ ಈ ಎಲ್ಲ ಕೊಲೆಗಳಲ್ಲೂ ಒಂದು ರೀತಿ ಸಾಮ್ಯತೆ ಕಾಣುತ್ತದೆ.

*(2ನೇ ಪುಟಕ್ಕೆ)*

## ಏನಿದು ಪಿಎಫ್ಐ?

ಕೇರಳದಲ್ಲಿ ಮೂಲವನ್ನು ಹೊಂದಿರುವ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಅಥವಾ ಪಿಎಫ್ಐ 2006ರಲ್ಲಿ ಪ್ರಾರಂಭಗೊಂಡ ಒಂದು ಮುಸ್ಲಿಂ ಮೂಲಭೂತವಾದಿ ಸಂಘಟನೆಯಾಗಿದೆ. ಇದು ನಿಷೇಧಿತ ಉಗ್ರ ಸಂಘಟನೆ ಸ್ಟೂಡೆಂಟ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಸಿಮಿ)ದ ಹೊಸ ರೂಪ. ಪಿಎಫ್ಐನ ಮುಖಂಡರು ಬಹುತೇಕ ಸಿಮಿಯ ಕಾರ್ಯಕರ್ತರೇ ಆಗಿದ್ದಾರೆ. ಉದಾಹರಣೆಗೆ ಪಿಎಫ್ಐನ ಸಂಸ್ಥಾಪಕರಲ್ಲೊಬ್ಬ ಅಬ್ದುಲ್ ರೆಹಮಾನ್ ಸಿಮಿಯ ರಾಷ್ಟ್ರೀಯ ಕಾರ್ಯದರ್ಶಿಯಾಗಿದ್ದ, PFIನ ಕೇರಳದ ಸೆಕ್ರೆಟರಿ ಅಬ್ದುಲ್ ಹಮೀದ್ ಮಾಸ್ಟರ್ ಸಿಮಿಯ ಕೇರಳ ಸೆಕ್ರೆಟರಿಯಾಗಿದ್ದ. ಈ ಸಂಘಟನೆ ಆರಂಭವಾದಾಗಿನಿಂದಲೂ ಒಂದಿಲ್ಲೊಂದು ಸಮಾಜಘಾತುಕ ಮತ್ತು ದೇಶವಿರೋಧಿ ಕಾರ್ಯಗಳಿಗಾಗಿ ಸದಾ ಸುದ್ದಿಯಲ್ಲಿದೆ. ಕಿಡ್ನಾಪ್, ಕೊಲೆ, ಬೆದರಿಕೆ ಹಾಕುವುದು, ಗಲಭೆ ಹುಟ್ಟಿಸುವುದು, ದ್ವೇಷ ಹರಡುವುದು ಮೊದಲಾದವುಗಳಿಂದ ಹಿಡಿದು ಮತೀಯ ಮೂಲಭೂತವಾದ, ಲವ್ ಜಿಹಾದ್, ಇಸ್ಲಾಂ ಭಯೋತ್ಪಾದಕ ಸಂಘಟನೆಗಳೊಂದಿಗೆ

*(2ನೇ ಪುಟಕ್ಕೆ)*

# ಹತ್ಯೆಗೀಡಾದ ಹಿಂದು ಸಂಘಟನೆಗಳ ಕಾರ್ಯಕರ್ತರು



1

### ವಿಶ್ವನಾಥ್

**2015ರ ಫೆಬ್ರುವರಿ 19ರಂದು ಶಿವಮೊಗ್ಗದಲ್ಲಿ ಫಿಎಫ್ಐ ಕಾರ್ಯಕರ್ತರು ಜಾಥಾ ನಡೆಸಿದ್ದರು. ಜಾಥಾ ವೇಳೆ ಬೈಕ್‌ನಲ್ಲಿ ಹೋಗುತ್ತಿದ್ದ ಅಮಾಯಕ ಹಿಂದು ಸಂಘಟನೆಯ ಕಾರ್ಯಕರ್ತ ವಿಶ್ವನಾಥ್ (32 ವರ್ಷ) ಮೇಲೆ ಏಕಾಏಕಿ ಹಲ್ಲೆ ನಡೆಸಿ, ಚೂರಿ ಇರಿದು ಕೊಲೆ ಮಾಡಲಾಗಿತ್ತು.**



2

### ಪ್ರಶಾಂತ್ ಪೂಜಾರಿ

**2015ರ ಅಕ್ಟೋಬರ್ 9ರಂದು ಆರೆಸ್ಸೆಸ್ ಮತ್ತು ಬಜರಂಗದಳದ ಸಕ್ರಿಯ ಕಾರ್ಯಕರ್ತ ಪ್ರಶಾಂತ್ ಪೂಜಾರಿ (29) ಅವರನ್ನು ಹತ್ಯೆ ಮಾಡಿದ್ದರು. ದಕ್ಷಿಣ ಕನ್ನಡದ ಮೂಡುಬಿದಿರೆಯಲ್ಲಿ ಕಸಾಯಿಖಾನೆ ಮುಚ್ಚಿಸಿದ ದ್ವೇಷದ ಮೇಲೆ ಕೊಲ್ಲಲಾಗಿತ್ತು. ಪ್ರಶಾಂತ್ ಹೂ ಮಾರಾಟದ ಜೊತೆಗೆ ಗೋ ಸಂರಕ್ಷಣೆಯ ಕಾರ್ಯದಲ್ಲಿ ತೊಡಗಿದ್ದರು.**



3

### ಕುಟ್ಟಪ್ಪ

**2015ರ ನವೆಂಬರ್ 10ರಂದು ಕೊಡಗು ಜಿಲ್ಲೆಯಲ್ಲಿ ಟಿಪ್ಪು ಜಯಂತಿ ವಿರೋಧಿಸಿ ನಡೆಯುತ್ತಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಆರೆಸ್ಸೆಸ್ ಕಾರ್ಯಕರ್ತ ಮತ್ತು ಕೊಡಗು ಜಿಲ್ಲೆಯ ವಿಶ್ವ ಹಿಂದು ಪರಿಷತ್‌ನ ಸಂಘಟನಾ ಕಾರ್ಯದರ್ಶಿ ಕುಟ್ಟಪ್ಪ (67) ಅವರನ್ನು ಗುಂಪೊಂದು ಅಟ್ಟಾಡಿಸಿಕೊಂಡು ಹೋಗಿ ಹಲ್ಲೆ ಮಾಡಿದ್ದರು. ಪರಿಣಾಮ ಅವರು ಮೃತಪಟ್ಟಿದ್ದರು.**



4

### ರಾಜು ಕ್ಯಾತಮಾರನಹಳ್ಳಿ

**ಬಿಜೆಪಿ ಮುಖಂಡ ರಾಜು ಕ್ಯಾತಮಾರನಹಳ್ಳಿ (37) ಅವರನ್ನು 2016ರ ಮಾ. 13ರಂದು ಮೈಸೂರಿನ ಉದಯಗಿರಿ ಬಡಾವಣೆಯಲ್ಲಿ ಕೊಲೆ ಮಾಡಲಾಗಿತ್ತು. ಸ್ನೇಹಿತರ ಜತೆ ಟೀ ಕುಡಿಯುತ್ತಿದ್ದಾಗ ದಾಳಿ ಮಾಡಿದ ನಾಲ್ಕೈದು ಜನರ ತಂಡ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು. ಕ್ಯಾತಮಾರನಹಳ್ಳಿ ಅಕ್ರಮ ಮಸೀದಿ ನಿರ್ಮಾಣಕ್ಕೆ ತಡೆಯೊಡ್ಡಿದ್ದ ರಾಜು, ಗಣೇಶ ಮಂದಿರ ಕಟ್ಟಲು ಮುಂದಾಳತ್ವ ವಹಿಸಿದ್ದರಿಂದ ಹತ್ಯೆ ಮಾಡಲಾಗಿತ್ತು.**



5

### ಪ್ರವೀಣ್ ಪೂಜಾರಿ

**2016ರ ಆಗಸ್ಟ್ 14ರಂದು ಮಧ್ಯರಾತ್ರಿ 12.30ಕ್ಕೆ ಅಖಂಡ ಭಾರತ ಸಂಕಲ್ಪ ದಿವಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮನೆಗೆ ಮರಳುತ್ತಿದ್ದ ಆರೆಸ್ಸೆಸ್ ಕಾರ್ಯಕರ್ತ ಪ್ರವೀಣ್ ಪೂಜಾರಿ (32) ಅವರನ್ನು ಮಾರ್ಗ ಮಧ್ಯದಲ್ಲಿ ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಕೊಲೆ ಮಾಡಲಾಗಿತ್ತು.**



6

### ರುದ್ರೇಶ್

**2016ರ ಅಕ್ಟೋಬರ್ 16ರಂದು ಆರೆಸ್ಸೆಸ್ ಕಾರ್ಯಕರ್ತ ಬೆಂಗಳೂರಿನ ಶಿವಾಜಿನಗರದ ರುದ್ರೇಶ್ (42) ಅವರನ್ನು ಹಾಡುಹಗಲೇ ಹತ್ಯೆ ಮಾಡಲಾಗಿತ್ತು. ಆರೆಸ್ಸೆಸ್ ಪಥಸಂಚಲನದಲ್ಲಿ ಭಾಗವಹಿಸಿದ್ದ ರುದ್ರೇಶ್‌ನನ್ನು ಗಣವೇಷದಲ್ಲಿರುವಾಗಲೇ ಕೊಲೆ ಮಾಡಲಾಗಿತ್ತು. ಈ ಸಂಬಂಧ ಪಿಎಫ್ಐ ಬೆಂಗಳೂರು ನಗರ ಘಟಕದ ಅಧ್ಯಕ್ಷ ಸೇರಿ ಐವರನ್ನು ಬಂಧಿಸಲಾಗಿದೆ.**



7

### ಕಾರ್ತಿಕ್ ರಾಜ್

**2016ರ ಅಕ್ಟೋಬರ್ 23ರಂದು ಬಿಜೆಪಿ ಮುಖಂಡರ ಮಗ ಆರೆಸ್ಸೆಸ್ ಕಾರ್ಯಕರ್ತ ಕಾರ್ತಿಕ್ ರಾಜ್ (27) ಅವರನ್ನು ಮಂಗಳೂರಿನ ಕೊಣಾಜೆ ಪೊಲೀಸ್ ಠಾಣೆಯ ಬಳಿಯೇ ದುಷ್ಕರ್ಮಿಗಳು ದಾಳಿ ಮಾಡಿ ಹತ್ಯೆಗೈದಿದ್ದರು.**



8

### ಮಾಗಳಿ ರವಿ

**2016ರ ನವೆಂಬರ್ 5ರಂದು ಮೈಸೂರಿನ ಪಿರಿಯಾಪಟ್ಟಣ ತಾಲೂಕಿನ ಬಿಜೆಪಿ ಮುಖಂಡ ಮಾಗಳಿ ರವಿ (31) ಪಿರಿಯಾಪಟ್ಟಣದಿಂದ ಸುಮಾರು 4 ಕಿ.ಮೀ. ದೂರದ ಸಿದ್ದಾಪುರ ರಸ್ತೆಯ ಕಾಡುತೋಟದ ಸಮೀಪ ಹತ್ಯೆಗೈದಿದ್ದರು. ಪಿರಿಯಾಪಟ್ಟಣದಲ್ಲಿ ನಡೆದ ಟಿಪ್ಪು ಜಯಂತಿ ಪೂರ್ವಭಾವಿ ಸಭೆ ಮುಗಿಸಿ ಬೈಕ್‌ನಲ್ಲಿ ಮನೆಗೆ ಮರಳುತ್ತಿದ್ದ ರವಿಯನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ವ್ಯವಸ್ಥಿತವಾಗಿ ಕೊಲೆಗೈದಿದ್ದರು.**

## ಏನಿದು ಪಿಎಫ್ಐ?

*(1ನೇ ಪುಟದಿಂದ)*

ಸಂಬಂಧಗಳವರೆಗೆ ಅನೇಕ ಆರೋಪಗಳು ಪಿಎಫ್ಐ ಮೇಲೆ ನಿರಂತರ ಕೇಳಿ ಬಂದಿವೆ. ನ್ಯಾಷನಲ್ ಡೆವೆಲೊಪ್‌ಮೆಂಟ್ ಫ್ರಂಟ್(NDF), ಕರ್ನಾಟಕ ಫೋರಮ್ ಫಾರ್ ಡಿಗ್ನಿಟಿ (KFD), ಮನಿತ ನೀತಿ ಪಸರೈ(MNP) ಮೊದಲಾದ ಸಂಘಟನೆಗಳು ಪಿಎಫ್ಐನಲ್ಲಿ ವಿಲೀನಗೊಂಡು ದಕ್ಷಿಣ ಭಾರತದ ರಾಜ್ಯಗಳಿಗೆ ಪಿಎಫ್ಐ ಹರಡಿಕೊಂಡಿದೆ. ನ್ಯಾಷನಲ್ ವುಮನ್ಸ್ ಫ್ರಂಟ್, ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಮೊದಲಾದ ವಿವಿಧ ಮೋರ್ಚಾಗಳ ಮೂಲಕ ತನ್ನ ಜಾಲವನ್ನು ವಿಸ್ತರಿಸಿದ್ದು 80 ಸಾವಿರಕ್ಕೂ ಹೆಚ್ಚು ಸದಸ್ಯತ್ವ ಇದೆ ಎಂದು ಸ್ವತಃ ಹೇಳಿಕೊಂಡಿದೆ. ಸಮಾನತೆಯ ಸಮಾಜ ಸ್ಥಾಪನೆಗಾಗಿ ಹೋರಾಡುವ ಸಾಮಾಜಿಕ ಸಂಘಟನೆ ಎಂದು ಹೇಳಿಕೊಳ್ಳುವ ಈ ಸಂಘಟನೆಯ ಸದಸ್ಯರೆಲ್ಲರೂ ಮುಸ್ಲಿಮರು. ಸೋಷಿಯಲಿಸ್ಟ್ ಡೆಮಾಕ್ರಾಟಿಕ್ ಪಾರ್ಟಿ ಆಫ್ ಇಂಡಿಯಾ ಅಥವಾ ಎಸ್‌ಡಿಪಿಐ ಪಿಎಫ್ಐ ಹುಟ್ಟುಹಾಕಿದ ರಾಜಕೀಯ ಪಕ್ಷವಾಗಿದ್ದು ಆಸ್ಸಾಮಿನ ಬದ್ರುದ್ದೀನ ಅಜ್ಮಲ್‌ನ ಏಐಯುಡಿಎಫ್ ಮತ್ತು ಹೈದರಾಬಾದಿನ ಓವೈಸಿಯ ಎಂಐಎಂ ಮಾದರಿಯಲ್ಲಿ ದಕ್ಷಿಣ ಭಾರತದಲ್ಲಿ ಮುಸಲ್ಮಾನರ ಪಕ್ಷವಾಗಿ ನೆಲೆಗೊಳ್ಳಲು ಪ್ರಯತ್ನಿಸುತ್ತಿದೆ.

ಏಪ್ರಿಲ್ 2013ರಲ್ಲಿ ಕೇರಳದ ಕಣ್ಣೂರಿನ ನಾರತ್‌ನಲ್ಲಿನ PFI ತರಬೇತಿ ಕೇಂದ್ರದ ಮೇಲೆ ಪೋಲಿಸರು ದಾಳಿ ಮಾಡಿದಾಗ ನಾಡಬಾಂಬುಗಳು, ಮಚ್ಚು ಮೊದಲಾದ ಆಯುಧಗಳು, ಬಾಂಬ್ ತಯಾರಿಕಾ ಕಚ್ಚಾವಸ್ತುಗಳು ದೊರೆತವು, 21 PFI ಕಾರ್ಯಕರ್ತರು ಬಂಧಿತರಾದರು. 2011ರಲ್ಲಿ ಮೈಸೂರಿನಲ್ಲಿ ಇಬ್ಬರು ಹುಡುಗರನ್ನು ಅಪಹರಿಸಿದ ಕೆಎಫ್‌ಡಿಯ ಕಾರ್ಯಕರ್ತರು ಸಂಘಟನೆಯ ಫಂಡಿಗಾಗಿ 5ಕೋಟಿ ಒತ್ತೆ ಹಣದ ಬೇಡಿಕೆ ಇಟ್ಟಿದ್ದರು. ಆ ಇಬ್ಬರೂ ಹುಡುಗರನ್ನು ಸಾಯಿಸಲಾಯಿತು. 2012ರಲ್ಲಿ ಕೇರಳ ಸರ್ಕಾರ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಆರೆಸ್ಸೆಸ್ ಮತ್ತು ಸಿಪಿಐ(ಎಮ್)ನ ಕಾರ್ಯಕರ್ತರ ಕೊಲೆಯ 27 ಪ್ರಕರಣಗಳಲ್ಲಿ ಪಿಎಫ್ಐ ಕೈವಾಡ ಇದೆ ಎಂದು ಹೇಳಿದೆ. 2012ರಲ್ಲಿ ಪುನಾ, ಚೆನ್ನೈ, ಹೈದರಾಬಾದ್, ದೆಹಲಿಗಳಿಂದ ಲಕ್ಷಾಂತರ ಎಸ್‌ಎಮ್‌ಎಸ್‌ಗಳನ್ನು ಕಳುಹಿಸಿ ಇತರ ನಗರಗಳಲ್ಲಿ ನೆಲೆಸಿರುವ ಪೂರ್ವೋತ್ತರ ರಾಜ್ಯದ ಜನರನ್ನು ಬೆದರಿಸುವ ಪ್ರಚಾರಕಾರ್ಯದ ಹಿಂದೆ ಪಿಎಫ್ಐನ ಅಂಗ ಸಂಸ್ಥೆಗಳಾದ ಕೆಎಫ್‌ಡಿ, ಎಮ್‌ಎನ್‌ಪಿಗಳಿದ್ದವು. ಇವುಗಳಲ್ಲಿ ಕೆಲವು SMSಗಳು ಪಾಕಿಸ್ತಾನದಿಂದಲೂ ಕಳುಹಿಸಲ್ಪಟ್ಟಿದ್ದವು. ಇತ್ತೀಚಿನ ಪಿಎಫ್ಐಗೆ ಸೇರಿದ ಕೆಲವು ಉಗ್ರರು ಐಎಸ್‌ಐಎಸ್‌ನ್ನು ಸೇರಿರುವುದು ಕೂಡಾ ವರದಿಯಾಗಿವೆ.


*1ನೇ ಪುಟದಿಂದ...*

ರುದ್ರೇಶ್ ಕೊಲೆ ಪ್ರಕರಣದಲ್ಲಿ ಬಂಧಿತರಾದ ನಾಲ್ವರು ನೀಡಿದ ಮಾಹಿತಿಗಳು ಇನ್ನೂ ಬೆಚ್ಚಿ ಬೀಳಿಸುವಂಥವು. ತನಿಖೆ ನಡೆಸುತ್ತಿರುವ ಪೊಲೀಸರೇ ಹೇಳುವಂತೆ ಹತ್ಯೆಗೂ ಮೊದಲು ಅವರು ಉಗ್ರ ಸಂಘಟನೆಯಿಂದ ತರಬೇತಿ ಪಡೆದಿದ್ದರು. ಅವರ ಮನೆಯವರೇ ಪೊಲೀಸರಿಗೆ ನೀಡಿದ ಮಾಹಿತಿಯಂತೆ ಆಗಾಗ ಕೆಲವು ಸಭೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಕೇರಳ ಮತ್ತು ಆಂಧ್ರ ಪ್ರದೇಶಗಳಿಗೆ ಭೇಟಿ ನೀಡಿದ್ದರು. ಹಾಗೆಯೇ ರುದ್ರೇಶ್ ಜೊತೆಗೆ ಇನ್ನೋರ್ವ ಆರೆಸ್ಸೆಸ್ ಕಾರ್ಯಕರ್ತನನ್ನು ಕೊಲೆ ಮಾಡಿ ಸಂಘದ ಕಾರ್ಯಕರ್ತರಲ್ಲಿ ಭಯ ಹುಟ್ಟಿಸಲು ಬಯಸಿದ್ದರು ಎನ್ನುವ ಮಾಹಿತಿಯನ್ನು ಅವರು ನೀಡಿದ್ದಾರೆ. ಜೊತೆಗೆ ಮೈಸೂರಿನ ಸಂಸದ ಪ್ರತಾಪ ಸಿಂಹ ಸೇರಿದಂತೆ ಇನ್ನು ಕೆಲವು ಮುಖಂಡರನ್ನು ಕೊಲ್ಲಲು ಸಂಚು ನಡೆದಿತ್ತು ಎನ್ನುವ ವರದಿಗಳೂ ಬಂದಿವೆ. ಇವುಗಳಿಂದ ಸಂಘ ಪರಿವಾರಗಳಿಗೆ ಸೇರಿದ ಕಾರ್ಯಕರ್ತರ ಕೊಲೆ ಮತ್ತು ಹಲ್ಲೆಗಳ ಹಿಂದೆ ಸಂಘವನ್ನು ಬೆದರಿಸುವ ಒಂದು ವ್ಯವಸ್ಥಿತ ಸಂಚು ನಡೆದಿದ್ದು ಸ್ಪಷ್ಟ. ಜೊತೆಗೆ ಈ ಹಿಂಸೆಯ ಹಿಂದೆ ರಾಜಕೀಯ ಕುತಂತ್ರವೂ ಅಡಗಿದ್ದು ಪಿಎಫ್ಐನ ರಾಜಕೀಯ ಅಂಗವಾದ ಸೊಷಿಯಲಿಸ್ಟ್ ಡೆಮೋಕ್ರಾಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ)ವನ್ನು ಮುಸ್ಲಿಮರ ಪಕ್ಷವಾಗಿ ದಕ್ಷಿಣ ಭಾರತದಲ್ಲಿ ನೆಲೆಗೊಳಿಸುವ ಹುನ್ನಾರವೂ ಅಡಗಿದೆ.

ಟಿಪ್ಪು ಜಯಂತಿ ಆಚರಣೆಯು ವ್ಯಾಪಕ ಜನಾಕ್ರೋಶಕ್ಕೆ ಒಳಗಾಗಿದ್ದು, ರಾಜ್ಯದೆಲ್ಲೆಡೆ ಜನರು ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ಸಂಘ ಇದರ ಮುಂಚೂಣಿಯಲ್ಲಿರುವುದೂ ಇತ್ತೀಚಿಗೆ ಸಂಘಪರಿವಾರದ ಕಾರ್ಯಕರ್ತರ ಮೇಲೆ ಹಿಂಸಾಚಾರ ಹೆಚ್ಚಾಗಲು ಇನ್ನೊಂದು ಕಾರಣ. ಇದೇ (2016) ನವೆಂಬರ 4ರಂದು ಮೈಸೂರಿನ ಪಿರಿಯಾಪಟ್ಟಣದಲ್ಲಿ ಟಿಪ್ಪು ಜಯಂತಿ ಆಚರಣೆಗೆ ಸಂಬಂಧಿಸಿದ ಶಾಂತಿ ಸಭೆಯಲ್ಲಿ ಪಾಲ್ಗೊಂಡು ಮರಳುತ್ತಿದ್ದಾಗಲೇ ಮಾಗಳಿ ರವಿ ಸಂಶಯಾಸ್ಪದ ರೀತಿಯಲ್ಲಿ ಮರಣಹೊಂದಿದರು, ಘಟನೆಯ ಸನ್ನಿವೇಶವನ್ನು ನೋಡಿದರೆ ಇದು ವ್ಯವಸ್ಥಿತ ಕೊಲೆ ಎನ್ನುವುದು ಗೋಚರವಾಗುತ್ತದೆ. ಟಿಪ್ಪು ಜಯಂತಿ ಆಚರಣೆ ಮುಸ್ಲಿಂ ಮತಗಳನ್ನು ಸೆಳೆಯುವ ರಾಜಕೀಯ ಲಾಭಕ್ಕಾಗಿ ದುರುದ್ದೇಶದಿಂದ ಕೂಡಿದ್ದು ಎನ್ನುವುದು ಸ್ಪಷ್ಟ. ಕ್ರೂರಿ ಮತಾಂಧ ಟಿಪ್ಪುವಿನ ಐತಿಹಾಸಿಕ ನಿಜಸ್ವರೂಪವನ್ನು ಬಯಲು ಮಾಡಿದ್ದಲ್ಲದೆ ಆತನ ಜಯಂತಿ ಆಚರಣೆಯ ಹಿಂದಿನ ರಾಜಕೀಯ ದುರದ್ದೇಶದ ವಿರುದ್ಧ ಪ್ರಬಲವಾದ ಜನಾಭಿಪ್ರಾಯವು ರೂಪುಗೊಂಡಿದ್ದು ಅವರನ್ನು ಕೆರಳಿಸಿದೆ. ದುರದೃಷ್ಟದ ಸಂಗತಿಯೆಂದರೆ ಕಾಂಗ್ರೆಸ್ ಪಕ್ಷ ಮತ್ತು ರಾಜ್ಯದ ಕಾಂಗ್ರೆಸ್ ಸರ್ಕಾರ ಇಂತಹ ಸಮಾಜಘಾತುಕ ಶಕ್ತಿಗಳ ರಕ್ಷಣೆಗೆ ನಿಂತಿರುವಂತೆ ಕಾಣುತ್ತಿದೆ. ಪ್ರತಿಯೊಂದು ಬಾರಿ ಸಂಘಪರಿವಾರದ ಕಾರ್ಯಕರ್ತರ ಕೊಲೆಯಾದಾಗಲೂ ವೈಯಕ್ತಿಕ ದ್ವೇಷದಿಂದ ಕೊಲೆ, ಅಪಘಾತದಿಂದ ಸಾವು ಇತ್ಯಾದಿ ವಾದಗಳನ್ನು ತೇಲಿಬಿಟ್ಟು ತನಿಖೆಯ ದಾರಿತಪ್ಪಿಸುವ ಕೆಲಸವನ್ನು ಮಾಡಲಾಗುತ್ತಿದೆ. ಹತ್ಯೆಗೀಡಾದವರಿಗೆ ಮಸಿ ಬಳಿಯುವ ಪ್ರಯತ್ನವನ್ನೂ ಮಾಡಲಾಗುತ್ತಿದೆ.

ಪಿಎಫ್ಐನಂತಹ ಉಗ್ರವಾದಿ ಸಂಘಟನೆಯ ರಕ್ಷಣೆ ಅಥವಾ ಮತೀಯ ಮೂಲಭೂತವಾದವನ್ನು ಪೋಷಿಸುವ ನೀತಿಯಿಂದ ಮುಸ್ಲಿಂ ಮತಗಳ ಧ್ರುವೀಕರಣದಿಂದ ರಾಜಕೀಯ ಲಾಭವಾಗಬಹುದೆಂದು ಕಾಂಗ್ರೆಸ್ ಮತ್ತಿತರ ತಥಾಕಥಿತ ಸೆಕ್ಯುಲರ್ ಪಕ್ಷಗಳು ಭಾವಿಸಬಹುದು. ಆದರೆ ಇಂತಹ ನೀತಿಯು ಸಮಾಜಘಾತುಕ, ದೇಶವಿರೋಧಿ ಎನ್ನುವ ಎಚ್ಚರಿಕೆ ಇರಬೇಕು. ಹಾಗೆಯೇ ಇಂತಹ ಹಿಂಸಾಚಾರ ವಿರೋಧಗಳಿಂದ ಸಂಘ ಇನ್ನಷ್ಟು ಬಲಗೊಳ್ಳುವುದೇ ವಿನಹ ಎಂದಿಗೂ ಬೆದರದು ಎದೆಗುಂದದು. ಏಕೆಂದರೆ ಆರೆಸ್ಸೆಸ್ ಸಮಾಜ ಸಂಘಟನೆ ಮತ್ತು ರಾಷ್ಟ್ರೀಯ ಪುನರುತ್ಥಾನದ ಉನ್ನತ ಧ್ಯೇಯಕ್ಕಾಗಿ ಕಾರ್ಯ ಮಾಡುತ್ತಿದೆಯೇ ಹೊರತು, ಯಾವುದೇ ರಾಜಕೀಯ ಅಧಿಕಾರದ ಆಕಾಂಕ್ಷೆಗಳಿಗಲ್ಲ.

## ಮಹಾತ್ಮ ಜ್ಯೋತಿಬಾ ಫುಲೆ : ಚಿಂತನ–ದರ್ಶನ



ನ. 28 ಫುಲೆ ಅವರ ಪುಣ್ಯತಿಥಿ

ಮಹಾತ್ಮ ಜ್ಯೋತಿಬಾ ಫುಲೆ (1827–1890) ಅವರು ಭಾರತದ ಸಾಮಾಜಿಕ ಸುಧಾರಕರಲ್ಲಿ ಪ್ರಮುಖರು. ಸಮಾಜ ಸುಧಾರಕರಾಗಿ, ಸಮಾನತೆಯ ಹರಿಕಾರರಾಗಿ ದೀನ–ದಲಿತ–ಬಡವರ್ಗಗಳ ಏಳಿಗೆಗೆ ಅವಿರತವಾಗಿ ಶ್ರಮಿಸಿದವರು. ಜನಸಾಮಾನ್ಯರು ಡಾಂಭಿಕ, ಸಂಕುಚಿತ ಭಾವನೆಗಳಿಗೆ ಮರುಳಾಗದೆ, ಮಾನವ ಧರ್ಮವನ್ನು ಅಂಗೀಕರಿಸಬೇಕೆಂದು ಅಪೇಕ್ಷೆಪಟ್ಟವರು. ಜ್ಯೋತಿಬಾ ತಮ್ಮ ಪತ್ನಿ ಸಾವಿತ್ರಿಬಾಯಿ ಅವರಿಗೆ ತಾವೇ ಶಿಕ್ಷಣ ಕೊಟ್ಟು ವಿದ್ಯಾವಂತರಾಗಿಸಿದರು. ಸಾವಿತ್ರಿಬಾಯಿಗೆ ಮನೆಯೇ ಮೊದಲ ಪಾಠಶಾಲೆ, ಗಂಡನೇ ಪರಮಗುರು. ಗಾಂಧಿಜೀಗಿಂತಲೂ ಪೂರ್ವದಲ್ಲೇ ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದವರ ಶೈಕ್ಷಣಿಕ ಪ್ರಗತಿಗಾಗಿ ದುಡಿದವರು ಜ್ಯೋತಿಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ ದಂಪತಿಗಳು.

ಹೆಣ್ಣು ಮಕ್ಕಳಿಗೆ ಶಿಕ್ಷಣದ ಪ್ರಾಮುಖ್ಯತೆ, ಅಸ್ಪೃಶ್ಯತೆಯ ನಿರಾಕರಣೆ, ವಿಧವಾ ವಿವಾಹ ಮೊದಲಾದ ಸಾಮಾಜಿಕ ವಿಚಾರಗಳ ಮೂಲಕ ಇಂದಿಗೂ ಕಗ್ಗಂಟಾಗಿರುವ ಈ ಕುರೀತಿಗಳ ವಿರುದ್ಧ 150 ವರ್ಷಗಳ ಹಿಂದೆಯೇ ಧ್ವನಿ ಎತ್ತಿ ಬದಲಾವಣೆಯ ಬೀಜ ಬಿತ್ತಿದವರು ಜ್ಯೋತಿಬಾ ಫುಲೆ ದಂಪತಿಗಳು. ಜ್ಯೋತಿಬಾ ಮನಸ್ಸು ಮಾಡಿದ್ದರೆ ಸರ್ಕಾರಿ ನೌಕರಿಗೆ ಸೇರಿ, ಕ್ರಮೇಣ ಯಶಸ್ಸು ಸಾಧಿಸಿ ಹೈಕೋರ್ಟಿನ ಪ್ರಮುಖ ನ್ಯಾಯಾಧೀಶರು ಆಗಬಹುದಿತ್ತು. ಆದರೆ ಅವರು ಅವೆಲ್ಲವನ್ನು ತ್ಯಜಿಸಿ ಸಮಾಜ ಸುಧಾರಣಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.

### ಜ್ಯೋತಿಬಾರ ಪ್ರಮುಖ ಸಾಧನೆಗಳು

- ಪತ್ನಿ ಸಾವಿತ್ರಿಬಾಯಿಗೆ ಶಿಕ್ಷಕಿ ತರಬೇತಿ ನೀಡಿ ಮಹಾರಾಷ್ಟ್ರದ ಮೊಟ್ಟಮೊದಲ ಶಿಕ್ಷಕಿಯನ್ನಾಗಿಸಿದ್ದು (1847ರಲ್ಲಿ).
- ಪುಣೆಯ ಬುಧವಾರಪೇಟೆಯಲ್ಲಿ 1848ರ ಆಗಸ್ಟ್‌ನಲ್ಲಿ ಕನ್ಯಾ ಪಾಠಶಾಲೆ ಆರಂಭಿಸಿದರು. ಈ ಮೂಲಕ ಕನ್ಯಾಪಾಠಶಾಲೆ ಪ್ರಾರಂಭಿಸಿದ ಪ್ರಪ್ರಥಮ ಭಾರತೀಯ ಎಂಬ ಹೆಗ್ಗಳಿಕೆ.
- ವಿಧವೆಯರ ಮಕ್ಕಳಿಗಾಗಿ ಅನಾಥಾಲಯ ಸ್ಥಾಪನೆ(1863).
- ಸತ್ಯಶೋಧಕ ಸಮಾಜದ ಸ್ಥಾಪನೆ(1873).
- ರಾಯಗಢದಲ್ಲಿ ಶಿವಾಜಿ ಮಹಾರಾಜರ ಸಮಾಧಿಯ ಜೀರ್ಣೋದ್ಧಾರ.



ನೆಲದ ಮಾತು

## ಎಕರೆಗೆ 18 ಕ್ವಿಂಟಲ್ ! ರೈತ ವಿಜ್ಞಾನಿಗಳ ಸಾಧನೆ

ಮಳೆ ನಂಬಿಕೊಂಡು ಎಳೆ ಪೈರು ನಾಟಿ ಮಾಡಿದವರ ಮೊಗದಲ್ಲೀಗ ನಿರಾಶೆ. ಭತ್ತದ ಗದ್ದೆಗಳೆಲ್ಲ ಖಾಲಿ ಖಾಲಿ. ಆದರೆ ಭತ್ತ ಬೆಳೆಗಾರ, ಹಾವೇರಿ ಜಿಲ್ಲೆ ಚಿನ್ನಿಕಟ್ಟೆ ಗ್ರಾಮದ ಶ್ರೇಣಿಕ ರಾಜು ಅವರ ಮೊಗದಲ್ಲಿ ಮಂದಹಾಸ. ಸೋತ ಗದ್ದೆಗಳ ಮಧ್ಯೆ ಎದೆಯೆತ್ತರ ಬೆಳೆದು ನಿಂತಿರುವ ಅವರ ರಾಗಿ ಹೊಲ ಮಾತ್ರ ಎಲ್ಲರ ಕಣ್ಣು ಕುಕ್ಕುತ್ತಿದೆ.

ಈ ರಾಗಿ ಹೊಲ ಕೂಡ ಮೊದಲು ಭತ್ತದ ಗದ್ದೆಯಾಗಿತ್ತು. ಈಗ ಮಳೆ ಕೊರತೆ ಹಿನ್ನೆಲೆಯಲ್ಲಿ ರಾಗಿ ಹೊಲವಾಗಿ ಮಾರ್ಪಟ್ಟಿದೆ. ಕಡಿಮೆ ಮಳೆಯ ಮಧ್ಯೆಯೂ ಯಶಸ್ಸು ಕಾಣಲು ಸಾಧ್ಯವಾಗಿರುವುದು 'ಗುಳಿ ರಾಗಿ' ಪದ್ಧತಿಯಿಂದ. ಇದು ಅಪ್ಪಟ ರೈತ ಸಂಶೋಧನೆ. ಕಡಿಮೆ ಖರ್ಚಿನಲ್ಲಿ ಅಧಿಕ ಇಳುವರಿ ತೆಗೆಯುವ ವಿಶಿಷ್ಟ ವಿಧಾನ. ಹಸಿರು ಕ್ರಾಂತಿ ಹೆಸರಿನಲ್ಲಿ ಯಥೇಚ್ಛ ರಾಸಾಯನಿಕ ಸುರಿದು ಆರೈಕೆ ಮಾಡಿದರೂ 10–12 ಕ್ವಿಂಟಲ್ ಇಳುವರಿ ತೆಗೆಯುವುದು ಕಷ್ಟ. ಆದರೆ ಈ ವಿಧಾನದಲ್ಲಿ ಕನಿಷ್ಠವೆಂದರೂ 18 ಕ್ವಿಂಟಲ್ ಇಳುವರಿ ಪಡೆಯಬಹುದು. 25 ಕ್ವಿಂಟಲ್‌ವರೆಗೂ ಇಳುವರಿ ತೆಗದವರಿದ್ದಾರೆ!

ಇದು ಭತ್ತದಲ್ಲಿ ಅನುಸರಿಸುವ 'ಮಡಗಾಸ್ಕರ್' (ಎಸ್‌ಆರ್‌ಐ ಅಥವಾ ಶ್ರೀ) ವಿಧಾನದಂತಿದೆ. ಎಳೆಯ ಭತ್ತದ ಪೈರನ್ನು ನಿರ್ದಿಷ್ಟ ಅಂತರದಲ್ಲಿ ನಾಟಿಮಾಡಿ, ಆ ಬಳಿಕ ಪೈರುಗಳ ಸಾಲಿನ ಮಧ್ಯೆ ಕಳೆ ತೆಗೆಯುವುದು ಎಸ್‌ಆರ್‌ಐ ಪದ್ಧತಿಯಲ್ಲಿದೆ. 'ಗುಳಿ ರಾಗಿ' ಪದ್ಧತಿಯಲ್ಲೂ ಹೆಚ್ಚು ಕಡಿಮೆ ಇದೇ ವಿಧಾನವಿದೆ. ಸಮತಟ್ಟು ಮಾಡಿದ ಹೊಲದಲ್ಲಿ ಒಂದೂವರೆ ಅಡಿ ಅಂತರದಲ್ಲಿ ಅಡ್ಡ ಹಾಗೂ ಉದ್ದ ಸಾಲು ಮಾಡಲಾಗುತ್ತದೆ. ಈ ಎರಡು ಸಾಲುಗಳು ಸಂಧಿಸುವ ಜಾಗದಲ್ಲಿ ಗುಳಿ ಮಾಡಿ, ಅಲ್ಲಿ ಪೈರು ನಾಟಿ ಮಾಡುವ ಈ ವಿಧಾನದಲ್ಲಿ ಪೈರುಗಳಿಗೆ ಬೇರು ಬಿಡಲು ಸಾಕಷ್ಟು ಸ್ಥಳಾವಕಾಶ ಸಿಗುತ್ತದೆ. ಒಂದು ಗುಳಿಗೆ ಎರಡೇ ಪೈರು (ಕೆಲವೊಮ್ಮೆ ಒಂದೇ) ನಾಟಿ ಮಾಡುವುದರಿಂದ ಸೂರ್ಯನ ಶಾಖ, ನೀರು ಹಾಗೂ ಪೋಷಕಾಂಶಗಳು ಸರಿಯಾಗಿ ದೊರಕಿ, ಧಾರಾಳವಾಗಿ ತೆಂಡೆ ಹಾಗೂ ಮರಿ ತೆಂಡೆಗಳು ಒಡೆದು ಬೆಳೆಯುತ್ತವೆ. ಇದರಿಂದಾಗಿ ಇಳುವರಿ ಹೆಚ್ಚಾಗುತ್ತದೆ.

ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಚಿನ್ನಿಕಟ್ಟೆ ಗ್ರಾಮದಲ್ಲಿ ಕೆಲವು ರೈತರು ಗುಳಿ ರಾಗಿ ವಿಧಾನದಲ್ಲಿ ಯಶಸ್ಸು ಕಂಡಿದ್ದು ಪ್ರಚಾರ ಪಡೆಯಿತು. ಅಮೆರಿಕದ ಕಾರ್ನೆಲ್ ವಿಶ್ವವಿದ್ಯಾಲಯದ ಅಂತರರಾಷ್ಟ್ರೀಯ ಕೃಷಿ ವಿಭಾಗದ ಪ್ರಾಧ್ಯಾಪಕ ನಾರ್ಮನ್ ಅಪಾಫ್ ಚಿನ್ನಿಕಟ್ಟೆ ಗ್ರಾಮಕ್ಕೆ ಭೇಟಿ ನೀಡಿ ರೈತರ ಜತೆ ಚರ್ಚಿಸಿದರು. ಈ ಪದ್ಧತಿಯ ಬಗ್ಗೆ ತಮ್ಮ ಬ್ಲಾಗ್‌ನಲ್ಲಿ ದಾಖಲಿಸಿ, ಇತರ ದೇಶಗಳ ಕೃಷಿ ವಿಜ್ಞಾನಿಗಳ ಗಮನ ಸೆಳೆದರು. ಮಳೆ ಕೊರತೆಗೆ ಪರಿಹಾರ ಕೊಡುವ ಗುಳಿ ರಾಗಿ ಪದ್ಧತಿ ಈಗ ಬೇರೆ ರಾಜ್ಯಗಳಿಗೂ ವ್ಯಾಪಿಸಿದೆ.


ಕೃಪೆ: ಪ್ರಜಾವಾಣಿ

**ಸಂಪಾದಕೀಯ ಸಹಕಾರ** ಸತ್ಯನಾರಾಯಣ ಶಾನುಬೋಗ್, ಶೈಲೇಶ್ ಕುಲಕರ್ಣಿ, ಶ್ರೀಹರ್ಷ ಪೆರ್ಲ, ಪ್ರತಾಪ ಕೊಡಂಚ, ಶ್ರೀವತ್ಸ, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್



# ಟಿಪ್ಪು ಜಯಂತಿ ಆಚರಣೆಗೆ ರಾಜ್ಯದಾದ್ಯಂತ ವ್ಯಾಪಕ ವಿರೋಧ

**ನವೆಂಬರ್ 10ರಂದು ಟಿಪ್ಪು ಜಯಂತಿಯನ್ನು ಅಧಿಕೃತ ಸರ್ಕಾರಿ ಕಾರ್ಯಕ್ರಮವಾಗಿ ಆಚರಿಸುವ ರಾಜ್ಯ ಸರ್ಕಾರ ನಿರ್ಧಾರಕ್ಕೆ ರಾಜ್ಯಾದ್ಯಂತ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಮತಾಂಧ ಟಿಪ್ಪುವಿನ ಜಯಂತಿಯನ್ನು ಆಚರಿಸುವುದು ಕನ್ನಡ ನಾಡಿಗೆ ಮಾಡುವ ಅವಮಾನ ಎಂದು ಅನೇಕ ಸಾಹಿತಿಗಳು, ವಿವಿಧ ಜಾತಿ-ಮತಗಳ ಪ್ರಮುಖರು ಅಭಿಪ್ರಾಯಪಟ್ಟಿದ್ದಾರೆ.**



ಟಿಪ್ಪು ಒಬ್ಬ ಕನ್ನಡ ವಿರೋಧಿ, ವಿಗ್ರಹ ಭಂಜಕ. 20ನೇ ಶತಮಾನದ ಹಿಟ್ಲರ್. ಹಲವು ದೇವಸ್ಥಾನಗಳನ್ನು ಕೆಡವಿ ಅದೇ ಕಲ್ಲುಗಳಲ್ಲಿ ಮಸೀದಿ ಕಟ್ಟಿಸಿದವನು. ಲಕ್ಷಾಂತರ ಹಿಂದುಗಳನ್ನು ಮತ್ತು ಕ್ರಿಶ್ಚಿಯನ್ನರನ್ನು ಬಲವಂತವಾಗಿ ಮತಾಂತರ ಮಾಡಿಸಿದವನು, ಅಮಾನುಷವಾಗಿ ಕೊಂದವನು. ಇಂಥವನನ್ನು ಸ್ವಾತಂತ್ರ್ಯ ಹೋರಾಟಗಾರನೆಂದು ಬಿಂಬಿಸಲು ಪ್ರಯತ್ನಿಸುತ್ತಿರುವುದು ಸ್ವಾಂತಂತ್ರ್ಯ ಹೋರಾಟಗಾರರಾದ ಗಾಂಧಿಜೀ, ಸುಭಾಶ್ಚಂದ್ರ ಬೋಸ್, ಸರ್ದಾರ್ ವಲ್ಲಭಾಯ್ ಪಟೇಲ್‌ರಂತ ಮಹನೀಯರಿಗೆ ಎಸಗುವ ಅಪಚಾರ.

**– ಡಾ|| ಚಿದಾನಂದ ಮೂರ್ತಿ, ಖ್ಯಾತ ಇತಿಹಾಸ ತಜ್ಞ**



'ಟಿಪ್ಪು ಒಬ್ಬ ಮೂಲಭೂತವಾದಿ. ಕೊಡವರು, ಕ್ರಿಶ್ಚಿಯನ್ನರು (ಮಂಗಳೂರಿನ 20ಸಾವಿರ ಕ್ಯಾಥೊಲಿಕ್‌ರನ್ನು ಶ್ರೀರಂಗಪಟ್ಟಣದಲ್ಲಿ ಬಂಧಿಸಿಟ್ಟಿದ್ದ), ಹಿಂದುಗಳನ್ನು ಸೇರಿದಂತೆ ಲಕ್ಷಾಂತರ ಜನರ ಕಗ್ಗೊಲೆಗೆ ಆತ ಕಾರಣವಾಗಿದ್ದಾನೆ. ಯುದ್ಧಗಳ ಅಟ್ಟಹಾಸದಿಂದ ಆಕ್ರೋಶಗೊಂಡಿದ್ದ ಜನರ ಸಿಟ್ಟನ್ನು ಶಮನಮಾಡುವುದಕ್ಕಾಗಿ ಆತ ಶೃಂಗೇರಿ ಮಠಕ್ಕೆ ಕಾಣಿಕೆ ನೀಡಿದ್ದನಷ್ಟೆ. ಕನ್ನಡ ಪ್ರೀತಿಯೇನಿರಲಿಲ್ಲ. ನಾನೊಬ್ಬ ಕೊಂಕಣಿ. ಆತ ನಮ್ಮ ದೇವಾಲಯಗಳನ್ನೂ ನಾಶಮಾಡಿದ್ದ. ನಮ್ಮ ಸಮುದಾಯಕ್ಕೆ ಸೇರಿದ ಸಾವಿರಾರು ಜನರನ್ನು ಕೊಲೆಗೈದಿದ್ದ. ಹೀಗಾಗಿ ಸರ್ಕಾರದ ವತಿಯಿಂದ ಆತನ ಜಯಂತಿ ಆಚರಣೆಗೆ ನನ್ನ ವಿರೋಧವಿದೆ. ವಿವಾದಿತ ವ್ಯಕ್ತಿಯ ಜಯಂತಿಯನ್ನು ಸರ್ಕಾರದಿಂದ ಆಚರಿಸುವುದು ಬೇಡ; ರಾಜ್ಯವನ್ನು ಒಡೆಯುವ ಕೆಲಸ ಮಾಡಬಾರದು. ಸರ್ಕಾರದಿಂದ ಜಯಂತಿ ಆಚರಿಸಲೇಬೇಕಾದರೆ ಕನ್ನಡ ನಾಡಿನ ಪ್ರಗತಿಗಾಗಿ ಅಭೂತಪೂರ್ವ ಕೊಡುಗೆ ನೀಡಿದ ಮೈಸೂರು ಒಡೆಯರು, ಸರ್ ಮಿರ್ಜಾ ಇಸ್ಮಾಯಿಲ್, ಸರ್ ಎಂ. ವಿಶ್ವೇಶ್ವರಯ್ಯ ಅವರಂತಹ ಮಹಾನ್ ವ್ಯಕ್ತಿಗಳ ಜಯಂತಿ ಆಚರಿಸಲಿ.

**– ಟಿ.ವಿ. ಮೋಹನದಾಸ್ ಪೈ, ಅಧ್ಯಕ್ಷರು, ಮಣಿಪಾಲ್ ಗ್ಲೋಬಲ್ ಎಜುಕೇಷನ್**



ಟಿಪ್ಪು ಸ್ವಾತಂತ್ರ್ಯ ಹೋರಾಟಗಾರನಲ್ಲ. ಆತ ಆಗಿನ ಸಂಸ್ಥಾನವೊಂದರ ರಾಜ. ಎಲ್ಲಾ ರಾಜರಂತೆ ಟಿಪ್ಪು ಕೂಡಾ ತಮ್ಮ ಸಂಸ್ಥಾನ ಉಳಿಸಿಕೊಳ್ಳಲು ಬ್ರಿಟಿಷರ ವಿರುದ್ಧ ಹೋರಾಡಿದ್ದಾನೆ ಅಷ್ಟೆ. ನಿಜಾಮರು ಕೂಡಾ ಬ್ರಿಟಿಷರೊಂದಿಗೆ ಯುದ್ಧ ಮಾಡಿದ್ದರು. ಹಾಗೆಂದು ನಿಜಾಮರನ್ನು ಸ್ವಾತಂತ್ರ್ಯ ಹೋರಾಟಗಾರರೆಂದು ಹೇಳಲು ಸಾಧ್ಯವೇ? ಅಷ್ಟಕ್ಕೂ ಸರ್ಕಾರಕ್ಕೆ ಟಿಪ್ಪು ಜಯಂತಿ ಆಚರಿಸುವ ಅಗತ್ಯವಾದರೂ ಏನಿದೆ? ಸರ್ಕಾರಕ್ಕೆ ಆಗುವ ಪ್ರಯೋಜನವಾದರೂ ಏನು?

**– ಎಸ್.ಕೆ. ಮುಖರ್ಜಿ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ**



ಕರ್ನಾಟಕದ ಹೆಮ್ಮೆಯ ವೀರಕಲಿಗಳಾದ ಚಿತ್ರದುರ್ಗದ ರಾಜ ಮದಕರಿ ನಾಯಕ ಮತ್ತು ಓಬವ್ವ ಹಿಂದುಳಿದ ವರ್ಗಕ್ಕೆ ಸೇರಿದವರು. ಪರಿಶಿಷ್ಟ ಸಮಾಜಕ್ಕೆ ಸೇರಿದ ಓಬವ್ವ ಯಾವುದೇ ಪೂರ್ವತಯಾರಿಯಿಲ್ಲದೇ ಆಯುಧವೂ ಇಲ್ಲದೇ ಮನೆಗೆಲಸಕ್ಕೆ ಬಳಸುತ್ತಿದ್ದ ಒನಕೆಯನ್ನೇ ಆಯುಧವಾಗಿಸಿ 70ಕ್ಕೂ ಅಧಿಕ ಹೈದರಾಲಿಯ ಸೈನಿಕರನ್ನು ಕೊಂದಳು; ಅವರ ಮೋಸಕ್ಕೆ ಬಲಿಯಾದಳು. ಇದೊಂದು ಜಾಗತಿಕ ಪರಾಕ್ರಮ. ಮದಕರಿನಾಯಕನನ್ನು ಮೋಸದಿಂದ ಬಂಧಿಸಿ, ಅವನ ಮಕ್ಕಳು-ತಮ್ಮಂದಿರನ್ನು ಕೊಲ್ಲಿಸಿದ ಕ್ರೂರಿ ಟಿಪ್ಪು. ಇಂತಹವನ ಜಯಂತಿ ಆಚರಿಸುವುದು ಚಿತ್ರದುರ್ಗಕ್ಕೆ ಹಾಗೂ ಮದಕರಿ, ಓಬವ್ವರ ಶೌರ್ಯ, ಸಾಹಸ, ಪರಾಕ್ರಮಕ್ಕೆ ಎಸಗುವ ಅವಮಾನ. ಟಿಪ್ಪು, ಔರಂಗಜೇಬನಂಥವರು ನಡೆಸಿದ ದೌರ್ಜನ್ಯವನ್ನೇ ಇಂದು ಐಸಿಸ್ ಉಗ್ರರು ಅನುಸರಿಸುತ್ತಿದ್ದಾರೆ.

**– ಘಟಾಫಟ್ ಶ್ರೀನಿವಾಸ್, ಸಂಚಾಲಕರು, ಪರಿಶಿಷ್ಟ ಜಾತಿ/ವರ್ಗ ಮೀಸಲಾತಿ ಹಿತರಕ್ಷಣಾ ವೇದಿಕೆ**



ಕನ್ನಡ ಹಾಗೂ ಸಂಸ್ಕೃತಿ ಇಲಾಖೆ ಟಿಪ್ಪು ಜಯಂತಿ ಆಚರಿಸುವುದು, ಅರಣ್ಯ ಇಲಾಖೆ ಕಾಡುಗಳ್ಳ ವೀರಪ್ಪನ್ ಜಯಂತಿ ಆಚರಿಸಿದಂತೆ.

**– ಪ್ರತಾಪ ಸಿಂಹ, ಸಂಸದರು, ಮೈಸೂರು**



ಕೇರಳ, ತಮಿಳುನಾಡಿನ ಮುಸ್ಲಿಮರು ಅಲ್ಲಿನ ನಿವಾಸಿಗಳಂತೆ ಶುದ್ಧ ಮಲೆಯಾಳಿ, ತಮಿಳಿನಲ್ಲಿ ಮಾತನಾಡುತ್ತಾರೆ. ಆದರ ಕರ್ನಾಟಕದ ಮುಸ್ಲಿಮರು ಮಾತ್ರ ಕನ್ನಡ ಕಲಿಯುವುದಿಲ್ಲ. ಟಿಪ್ಪು ಕನ್ನಡ ವಿರೋಧಿಯಾಗಿದ್ದೇ ಇದಕ್ಕೆ ಕಾರಣ. ಟಿಪ್ಪು ಒಬ್ಬ ಮತಾಂಧನಾಗಿದ್ದ. ಆತ 27ಕ್ಕೂ ಹೆಚ್ಚು ಚರ್ಚುಗಳನ್ನು ನಾಶಮಾಡಿದ್ದ. ಮಕ್ಕಳು ಮಹಿಳೆಯರು ಸೇರಿದಂತೆ 80,000ಕ್ಕೂ ಹೆಚ್ಚು ಕಾಥೋಲಿಕ್ ಕ್ರಿಶ್ಚಿಯನ್ನರನ್ನು ಸೆರೆಹಿಡಿದು ಮಂಗಳೂರಿನಿಂದ ಶ್ರೀರಂಗಪಟ್ಟಣದವರೆಗೂ ನಡೆಸಿಕೊಂಡು ಹೋಗಿದ್ದ. ಅಂತಹವನ ಜಯಂತಿ ಆಚರಣೆ ಬೇಡ.

**– ಟಿ.ಜೆ. ಅಬ್ರಹಾಂ, ಯುನೈಟೆಡ್ ಕ್ರಿಶ್ಚಿಯನ್ ಅಸೋಸಿಯೇಷನ್**



ಹೈದರಾಲಿ ಮತ್ತು ಟಿಪ್ಪು ನಿಜಕ್ಕೂ ಮುಸ್ಲಿಮರಿಗೆ ಆದರ್ಶಪ್ರಾಯರೇ? ಟಿಪ್ಪು ಸುಲ್ತಾನ್ ಕೇರಳ, ಕೊಡಗು, ಮದರಾಸಿನ ದಂಡೆಯಾತ್ರೆಗಳಲ್ಲಿ ಮಾಡಿದ ದುರಾಚಾರಗಳನ್ನು ಬ್ರಿಟಿಷರ ವಿರುದ್ಧ ಹಗೆ, ಸಾಮ್ರಾಜ್ಯ ವಿಸ್ತರಣೆಯ ನೆಪವೊಡ್ಡಿ ಕ್ಷಮಿಸುವುದು ಮೂರ್ಖತನ. ಯಾವತ್ತಿದ್ದರೂ ಅನ್ಯಾಯ ಅನ್ಯಾಯವೇ; ದುರಾಚಾರ ದುರಾಚಾರವೇ. ಮುಸ್ಲಿಮರ ಒಳಮನಸ್ಸಿನಲ್ಲಿ ಅನಾಥಪ್ರಜ್ಞೆಯನ್ನು ಮೂಡಿಸಿ, ಅದನ್ನು ದುರುಪಯೋಗಪಡಿಸಿಕೊಳ್ಳುತ್ತ, ಅವರಿಗೆ ಸಾಂತ್ವನ ನೀಡುವ ನೆಪದಲ್ಲಿ ಅವರನ್ನು ಸಮಾಜದಿಂದ ಇನ್ನಷ್ಟು ವಿಮುಖರನ್ನಾಗಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವುದು ಈ ಜಯಂತಿ ಆಚರಣೆಯ ಹುನ್ನಾರ. ನಿಜವಾಗಿ ಮುಸ್ಲಿಮರನ್ನು ಒಂದು ಜಯಂತಿಯ ನೆಪದಲ್ಲಿ ಸಂತೋಷಪಡಿಸಬೇಕು ಅಂತಿದ್ದರೆ ಸರ್ಕಾರ ಟಿಪ್ಪು, ಹೈದರಾಲಿಯ ವೈಭವೀಕರಣ ನಿಲ್ಲಿಸಿ, ಕನ್ನಡ ನುಡಿಗೆ, ಸಂಸ್ಕೃತಿಗೆ ಕೊಡುಗೆ ಕೊಟ್ಟ ಸಂತಶಿಶುನಾಳರ ಜಯಂತಿಯನ್ನು ಆಚರಿಸಲಿ.

**– ಫಾತಿಮಾ ಬೆಳವಾಡಿ, ಮುಸ್ಲಿಂ ಚಿಂತಕಿ**

## ಇವರು ಸೆಲೆಬ್ರಿಟಿಗಳಲ್ಲ; ಸದ್ದಿಲ್ಲದ ಸಾಧಕರು

**ತಾವು ಬಯಸಿದ್ದನ್ನು ಪಡೆಯುವುದಕ್ಕೆ, ಅಂದುಕೊಂಡಿದ್ದನ್ನು ಸಾಧಿಸುವುದಕ್ಕೆ ಇಷ್ಟಕಾಮ್ಯ ಎಂದು ಕರೆಯುತ್ತಾರೆ. ಅದರಂತೆ ಸಂಕಷ್ಟಗಳ ನಡುವೆಯೂ ತಾವು ಕಟ್ಟಿಕೊಂಡ ಕನಸು, ಇಟ್ಟು ಕೊಂಡ ಗುರಿಯನ್ನು ತಲುಪಿದ ಸಾಧಕರಿವರು.**

## ಸುನಿಲ್ ಯಾದವ್

'ಭಾರತದಲ್ಲಿ ದಲಿತರು ಮತ್ತು ಹಿಂದುಳಿದವರನ್ನು ಶಿಕ್ಷಣದಿಂದ ಮಾತ್ರ ಅವರು ಉದ್ಧಾರವಾಗಬಹುದು ಎನ್ನುತ್ತಾರೆ ಯುವ ಸಾಧಕ ಸುನಿಲ್ ಯಾದವ್. ಮುಂಬೈನಲ್ಲಿ ಸಫಾಯಿ ಕರ್ಮಚಾರಿ ಕೆಲಸ ಮಾಡುತ್ತಲೇ ಎಂ.ಫಿಲ್ ಪದವಿ ಪಡೆದ ಹೆಗ್ಗಳಿಕೆ ಅವರದ್ದು. ಸುನಿಲ್ ಪೋಷಕರು ಕೂಡ ಸಫಾಯಿ ಕರ್ಮಚಾರಿ ಕೆಲಸ ಮಾಡುತ್ತಿದ್ದರು. ಅವರಿಗೆ ಚಿಕ್ಕ ವಯಸ್ಸಿನಿಂದಲೇ ಸುನಿಲ್, ಕಸ ಗುಡಿಸುವಾಗ ಮತ್ತು ಕಸ ಎತ್ತುವಾಗ ಸಹಾಯ ಮಾಡುತ್ತಿದ್ದರು. 18 ವರ್ಷ ತುಂಬಿದ ಕೂಡಲೇ ಸುನಿಲ್ ಸಹ ಸಫಾಯಿ ಕರ್ಮಚಾರಿ ಕೆಲಸಕ್ಕೆ ಸೇರಿಕೊಂಡರು. ಹಗಲು ಹೊತ್ತಿನಲ್ಲಿ ಕೆಲಸ ಮಾಡಿ ರಾತ್ರಿ ವೇಳೆಯಲ್ಲಿ ಕಾಲೇಜಿಗೆ ಹೋಗುತ್ತಿದ್ದರು.



ಪಿಯುಸಿ ಮತ್ತು ಬಿ.ಕಾಂ ಪದವಿಯನ್ನು ಸಂಜೆ ಕಾಲೇಜಿನಲ್ಲಿ ಪೂರೈಸಿದರು. ನಂತರ ಟಾಟಾ ಸಂಸ್ಥೆಯಲ್ಲಿ ಎಂ.ಫಿಲ್ ಪದವಿಗೆ ಸೇರಿದರು. 'ಮುಂಬೈನ ಸಫಾಯಿ ಕರ್ಮಚಾರಿಗಳ ಬದುಕು ಮತ್ತು ಬವಣೆ' ಎಂಬ ವಿಷಯವನ್ನು ಅಧ್ಯಯನಕ್ಕೆ ಆಯ್ದುಕೊಂಡರು. ಈ ವಿಷಯದ ಮೇಲೆ ಕ್ಷೇತ್ರಕಾರ್ಯ ನಡೆಸಬೇಕಾಗಿದ್ದರಿಂದ ರಜೆ ತೆಗೆದುಕೊಂಡು ಎಂ.ಫಿಲ್ ಪದವಿ ಪೂರೈಸಿದರು. ಸುನಿಲ್ ಮಂಡಿಸಿದ 'ಮುಂಬೈನ ಸಫಾಯಿ ಕರ್ಮಚಾರಿಗಳ ಬದುಕು ಮತ್ತು ಬವಣೆ' ಪ್ರಬಂಧ ಟಾಟಾ ಸಂಸ್ಥೆಯಿಂದ ಮನ್ನಣೆ ಪಡೆಯಿತು. ಇದನ್ನು ವಿಶ್ವಸಂಸ್ಥೆಯಲ್ಲೂ ಮಂಡಿಸಿದ್ದು ವಿಶೇಷ. ಸುನಿಲ್ ಅವರ ಪ್ರತಿಭೆಯನ್ನು ಗುರುತಿಸಿದ ಟಾಟಾ ಸಂಸ್ಥೆ, ಅವರನ್ನು ಪ್ರಾಧ್ಯಾಪಕ ಹುದ್ದೆಗೆ ನೇಮಿಸಿಕೊಂಡಿತು. ಬೀದಿ ಕಸವನ್ನು ಗುಡಿಸಿ, ಲಾರಿಗಳಿಗೆ ತುಂಬಿ, ಕಷ್ಟಪಟ್ಟು ಓದಿ ಉನ್ನತ ಸ್ಥಾನಕ್ಕೆ ಬಂದಿರುವ ಸುನಿಲ್ ಅವರ ಸಾಧನೆ ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17

15-11-2016



# ಕಮ್ಯುನಿಸ್ಟ್ ಕ್ರೌರ್ಯದ ವಿರುದ್ಧ ಕ್ರಮ ಕೈಗೊಳ್ಳಿ : ಆರೆಸ್ಸೆಸ್ ಆಗ್ರಹ

**ತೆಲಂಗಾಣದ ಭಾಗ್ಯನಗರ(ಹೈದರಾಬಾದ್)ದಲ್ಲಿ ಅಕ್ಟೋಬರ್ 23ರಿಂದ 25ರ ತನಕ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಕಾರ್ಯಕಾರಿ ಮಂಡಲಿ(ಎಬಿಕೆಎಂ)ಯು ಎರಡು ಪ್ರಮುಖ ನಿರ್ಣಯಗಳನ್ನು ಕೈಗೊಂಡಿದೆ. ಅವುಗಳ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.**

## ನಿರ್ಣಯ 1

### ಕೇರಳದಲ್ಲಿ ಅಂಕೆಯಿಲ್ಲದ ಕಮ್ಯುನಿಸ್ಟ್ ಹಿಂಸಾಚಾರ

ಕೇರಳದಲ್ಲಿ ಸಿಪಿಎಂ ಪಕ್ಷವು ಆರೆಸ್ಸೆಸ್ ಮತ್ತು ತನ್ನ ಇತರ ವಿರೋಧಿಗಳ ಮೇಲೆ ನಿರಂತರ ನಡೆಸಿರುವ ಹಿಂಸಾಚಾರವನ್ನು ಆರೆಸ್ಸೆಸ್ ಬಲವಾಗಿ ಖಂಡಿಸುತ್ತದೆ. 1942ರಲ್ಲಿ ಕೇರಳದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ತನ್ನ ಕಾರ್ಯ ಪ್ರಾರಂಭಿಸಿದಾಗಿನಿಂದ ಎಡಪಂಥೀಯರು, ವಿಶೇಷವಾಗಿ ಸಿಪಿಐ(ಎಮ್) ರಾಜ್ಯದ ಜನರಲ್ಲಿ ರಾಷ್ಟ್ರಪ್ರೇಮದ ಭಾವನೆ ಮತ್ತು ಏಕತೆಯನ್ನು ಮೂಡಿಸುವ ಆರೆಸ್ಸೆಸ್‌ನ ಕಾರ್ಯ ಹಾಗೂ ಸದಾ ಹೆಚ್ಚುತ್ತಿರುವ ಜನಪ್ರಿಯತೆಯಿಂದ ಎದೆಗುಂದಿ ಸಂಘದ ಶಾಖೆಗಳ ಮತ್ತು ಕಾರ್ಯಕರ್ತರ ಮೇಲೆ ಅಪ್ರಚೋದಿತ ದಾಳಿಗಳನ್ನು ನಡೆಸಿ ಆರೆಸ್ಸೆಸ್‌ನ್ನು ಮುಗಿಸುವ ನಿರರ್ಥಕ ಕಾರ್ಯದಲ್ಲಿ ತೊಡಗಿದ್ದಾರೆ.

ಇತ್ತೀಚೆಗೆ ಜುಲೈ 11 2016ರಂದು ಬಿಎಮ್‌ಎಸ್‌ನ ಕಾರ್ಯಕರ್ತರಾದ ಸಿ.ಕೆ. ರಾಮಚಂದ್ರನ್ ತನ್ನ ಮನೆಯಲ್ಲೇ, ಪತ್ನಿಯ ಎದುರಲ್ಲೇ ಅತ್ಯಂತ ಬೀಭತ್ಸವಾಗಿ ಕೊಲೆಗೀಡಾದರು. ಅಕ್ಟೋಬರ್ 12ರಂದು ಹಾಡುಹಗಲೇ ಗರ್ಭಿಣಿ ಸಹೋದರಿಗೆ ಔಷಧಿ ತರಲು ಹೊರಟಿದ್ದ ಕೆ. ರಮಿತ್‌ರನ್ನು ಮನೆಯ ಎದುರಿನಲ್ಲೆ ಕೊಚ್ಚಿ ಸಾಯಿಸಿದರು. ರಮಿತ್ ಕುಟುಂಬದ ಏಕೈಕ ಆಧಾರವಾಗಿದ್ದರು. ಬಸ್ ಕಂಡೆಕ್ಟರ್ ಆಗಿದ್ದ ರಮೀತ್‌ನ ತಂದೆ ಉತ್ತಮನ್‌ರನ್ನು ಕೂಡಾ 14 ವರ್ಷಗಳ ಹಿಂದೆ ಇದೇ ಸಿಪಿಐ(ಎಮ್)ನ ಗೂಂಡಾಗಳು ಕೊಲೆಮಾಡಿದ್ದರು. ಇವು ಸಿಪಿಐ(ಎಮ್)ನ ಹಿಂಸಾಚಾರ ಮತ್ತು ಅಸಹಿಷ್ಣುತೆಯ ಇತ್ತೀಚಿನ ಕೆಲ ಉದಾಹರಣೆಗಳಷ್ಟೆ.



ಕೇರಳದಲ್ಲಿ ಸಿಪಿಐ(ಎಮ್) ನೇತೃತ್ವದ ಎಲ್‌ಡಿಎಫ್ ಅಧಿಕಾರಕ್ಕೆ ಬಂದಾಗಲೆಲ್ಲ ಗೃಹ ಖಾತೆಯನ್ನು ಪಕ್ಷವೇ ವಹಿಸಿಕೊಳ್ಳುತ್ತದೆ ಹಾಗೂ ಪೊಲೀಸ್ ಪಡೆಗಳನ್ನು ತಮ್ಮ ಕೈಗೊಂಬೆಗಳನ್ನಾಗಿ ಮಾಡಿಕೊಳ್ಳುತ್ತದೆ. ಸಿಪಿಐ(ಎಮ್)ನ ಕಾರ್ಯಪದ್ಧತಿ ಕೇವಲ ಸಂಘದ ಕಾರ್ಯಕರ್ತರನ್ನು ವಿನಾಶ ಮಾಡುವುದಷ್ಟೇ ಅಲ್ಲ, ಅವರನ್ನು ಆರ್ಥಿಕವಾಗಿ ದುರ್ಬಲಗೊಳಿಸುವುದು, ಅವರ ಜಮೀನು, ಮನೆಗಳು, ಗೃಹಬಳಕೆಯ ವಸ್ತುಗಳು, ವಾಹನಗಳು ಇತ್ಯಾದಿಗಳನ್ನು ಹಾಳುಮಾಡಿ ಅವರನ್ನು ಭಯಗ್ರಸ್ತರನ್ನಾಗಿಸುತ್ತಿದೆ.

ಹಿಂಸಾಚಾರ ನಿರತ ದುಷ್ಕರ್ಮಿಗಳ ವಿರುದ್ಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆರೆಸ್ಸೆಸ್ ಆಗ್ರಹಿಸುತ್ತದೆ.

## ನಿರ್ಣಯ 2

### ಏಕಾತ್ಮ ಮಾನವದರ್ಶನ : ವರ್ತಮಾನದ ವೈಶ್ವಿಕ ಸಂಕಷ್ಟಕ್ಕೆ ಪರಿಹಾರ

ಸನಾತನ ಭಾರತೀಯ ದರ್ಶನದ ಆಧಾರದ ಮೇಲೆ ಪಂಡಿತ ದೀನದಯಾಳ ಉಪಾಧ್ಯಾಯರವರು ಪ್ರತಿಪಾದಿಸಿದ ಏಕಾತ್ಮ ಮಾನವದರ್ಶನ ತತ್ತ್ವವನ್ನು ಅನುಸರಿಸುವುದು ವಿಶ್ವದ ಮುಂದೆ ವರ್ತಮಾನ ಸನ್ನಿವೇಶದಲ್ಲಿ ಎದುರಾಗುತ್ತಿರುವ ಸವಾಲುಗಳಿಗೆ ಪರಿಹಾರ ಎಂದು ಆರೆಸ್ಸೆಸ್‌ನ ಬಲವಾದ ಅಭಿಪ್ರಾಯವಾಗಿದೆ. ವಿಶ್ವದ ಸಜೀವ ಹಾಗೂ ನಿರ್ಜೀವ ಘಟಕಗಳ ಸಾರ್ವತ್ರಿಕ ಹಿತದಿಂದ ಪ್ರೇರಣೆ ಪಡೆದು ವಿಶ್ವವನ್ನು ಸಮಗ್ರವಾದ ದೃಷ್ಟಿಕೋನದಿಂದ ಪೋಷಿಸುವುದು ಈ ತತ್ತ್ವದ ಆಧಾರವಾಗಿದೆ.

ವಿಶ್ವದಲ್ಲಿ ಬೆಳೆಯುತ್ತಿರುವ ಆರ್ಥಿಕ ಅಸಮಾನತೆ, ಪರಿಸರ ಅಸಮತೋಲನ ಮತ್ತು ಭಯೋತ್ಪಾದನೆಗಳು ಇಂದು ಮಾನವ ಕುಲದ ಮುಂದೆ ಗಂಭೀರವಾದ ಸವಾಲುಗಳನ್ನು ಮುಂದಿರಿಸಿವೆ. ಒಡೆಯುತ್ತಿರುವ ಕುಟುಂಬಗಳು ಮತ್ತು ಮನೋದೈಹಿಕ ಕಾಯಿಲೆಗಳು ಗಾಬರಿಗೊಳಿಸುವ ವೇಗದಲ್ಲಿ ಹೆಚ್ಚಾಗುತ್ತಿವೆ. ಪ್ರಕೃತಿಯ ಸ್ವಚ್ಛಂದ ಶೋಷಣೆಯಿಂದಾಗಿ ಏರುತ್ತಿರುವ ತಾಪಮಾನ, ಸಮುದ್ರಮಟ್ಟದಲ್ಲಿ ನಿರಂತರ ಏರುವಿಕೆ, ಹೆಚ್ಚುತ್ತಿರುವ ವಾಯು–ಜಲ–ಭೂಮಾಲಿನ್ಯ, ಜಲ ಸಂಕಷ್ಟ, ಭೂಮಿಯ ಫಲವತ್ತತೆ ಕುಂದುತ್ತಿರುವುದು, ಜೀವ ವೈವಿಧ್ಯದ ವಿನಾಶ ಮುಂತಾದ ಪ್ರಾಕೃತಿಕ ವಿಕೋಪದ ಸವಾಲುಗಳಿಂದ ಹದಗೆಡುತ್ತಿದೆ. ಈ ಎಲ್ಲ ಸಮಸ್ಯೆಗಳನ್ನು ಏಕಾತ್ಮ ಮಾನವತೆಯ ತತ್ತ್ವಗಳನ್ನು ಅನುಸರಿಸಿ ವ್ಯಕ್ತಿಯಿಂದ ಇಡೀ ಜೀವಪ್ರಪಂಚ, ವ್ಯಕ್ತಿ– ಪರಿಸರಗಳ ನಡುವೆ ಪರಸ್ಪರ ಸಮನ್ವಯ ಸಾಧನೆ ಮತ್ತು ಚಿರಂತನ ಹಾಗೂ ಸಮಗ್ರ ಚಿಂತನೆಯ ಮೂಲಕ ಪರಿಹರಿಸಬಹುದು.

ಇದು ಪಂಡಿತ ದೀನದಯಾಳ್ ಉಪಾಧ್ಯಾಯರವರ ಜನ್ಮಶತಮಾನೋತ್ಸವದ ವರ್ಷ. ಈ ಸಂದರ್ಭವು ಅವರ ಈ ತತ್ತ್ವದ ಅನುಷ್ಠಾನಕ್ಕೆ ಸೂಕ್ತ ಅವಕಾಶವೆಂದು ಭಾವಿಸಿ, ನಿಸರ್ಗವೂ ಸೇರಿದಂತೆ ವಿಶ್ವದ ಎಲ್ಲ ಅಂಗಗಳ ನಡುವೆ ಸಮನ್ವಯ ಸಾಧಿಸಲು ಬೇಕಾದ ಸರ್ವ ಪ್ರಯತ್ನಗಳನ್ನು ಕೈಗೊಳ್ಳುವಂತೆ ಸ್ವಯಂಸೇವಕರು ಸೇರಿದಂತೆ ದೇಶದ ಎಲ್ಲ ನಾಗರಿಕರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಆರೆಸ್ಸೆಸ್ ಕರೆ ನೀಡಿದೆ.

# ಬೆಂಗಳೂರಿನಲ್ಲಿ ಡಿ.14ರಿಂದ ಹಿಂದೂ ಆಧ್ಯಾತ್ಮಿಕ ಮತ್ತು ಸೇವಾ ಮೇಳ

**ಹಿಂದುಧರ್ಮದ ಆಧ್ಯಾತ್ಮಿಕ ಶಕ್ತಿ ಹಾಗೂ ಸೇವಾವ್ಯಾಪ್ತಿಯನ್ನು ಸಮಾಜಕ್ಕೆ ಪರಿಚಯಿಸುವ ಉದ್ದೇಶದಿಂದ 2015ರಲ್ಲಿ ನಡೆದ ಹಿಂದೂ ಆಧ್ಯಾತ್ಮಿಕ ಮತ್ತು ಸೇವಾ ಮೇಳದ (Hindu Spiritual and Service Fair- HSSF) ಅಭೂತಪೂರ್ವ ಯಶಸ್ಸಿನ ನಂತರ ಇದೀಗ 2016ನೇ ಸಾಲಿನ ಮೇಳವು ಡಿಸೆಂಬರ್ 14 ರಿಂದ ಡಿ. 18ರ ವರೆಗೆ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆಯಲಿದೆ.**

- **ಉದ್ಘಾಟನೆ:** ಡಿಸೆಂಬರ್ 14ರಂದು ಆರ್ಟ್ ಆಫ್ ಲೀವಿಂಗ್‌ನ ಪೂಜ್ಯ ಶ್ರೀ ಶ್ರೀ ರವಿಶಂಕರ ಗುರೂಜಿ, ಸುತ್ತೂರು ಮಠದ ಪೂಜ್ಯ ಶ್ರೀ ಶಿವರಾತ್ರೀಶ್ವರ ಸ್ವಾಮೀಜಿ, ಆದಿಚುಂಚನಗಿರಿ ಮಠದ ಪೂಜ್ಯ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಧರ್ಮಸ್ಥಳದ ಪೂಜ್ಯ ಡಾ॥ ವೀರೇಂದ್ರ ಹೆಗ್ಗಡೆ ಹಾಗೂ ಕರ್ನಾಟಕದ ಹಲವು ಮಠಾಧಿಪತಿಗಳ ಸಮ್ಮುಖದಲ್ಲಿ. ಪ್ರಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಅಂಕಣಕಾರ ಎಸ್. ಗುರುಮೂರ್ತಿ ಅವರು ಪ್ರಧಾನ ಭಾಷಣ ಮಾಡಲಿದ್ದಾರೆ.
- **‘ರಾಷ್ಟ್ರ ವಂದನ’** (ಡಿ.15ರಂದು) 5000ಕ್ಕೂ ಹೆಚ್ಚು ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ
- **‘ಮಾತೃ ವಂದನ’** (ಡಿ. 16ರಂದು) – ಸಾವಿರ ಕುಟುಂಬಗಳ ಸಮ್ಮುಖದಲ್ಲಿ
- **‘ಭೂಮಿ ವಂದನಾ’** (ಡಿ. 17)– ಸುತ್ತಮುತ್ತಲಿನ ಹಳ್ಳಿಗಳ 2000 ಅಧಿಕ ರೈತರು ಭಾಗವಹಿಸಲಿದ್ದಾರೆ.
- **‘ಕುಟುಂಬ ವಂದನ’** (ಡಿ. 18) – 300ಕ್ಕೂ ಅಧಿಕ ಅವಿಭಕ್ತ ಕುಟುಂಬಗಳು ಪಾಲ್ಗೊಳ್ಳಲಿವೆ.
- **ಸೇವಾ ಪ್ರದರ್ಶನ ಮಳಿಗೆ:** ಕರ್ನಾಟಕದ 250ಕ್ಕೂ ಹೆಚ್ಚು ಹಿಂದೂ ಸಾಮಾಜಿಕ–ಧಾರ್ಮಿಕ ಸೇವಾ ಸಂಸ್ಥೆಗಳ ಸೇವಾ ಚಟುವಟಿಕೆಗಳ ಕುರಿತು ಪ್ರದರ್ಶನ ಮಳಿಗೆಗಳನ್ನು ತೆರೆಯಲಾಗುತ್ತದೆ.
- ಪ್ರತಿದಿನ ಸಾಮಾಜಿಕ–ಧಾರ್ಮಿಕ ವಿಷಯಗಳ ಕುರಿತು ವಿಚಾರ ಸಂಕಿರಣ – ಪ್ರಖ್ಯಾತ ವಿದ್ವಾಂಸರು, ಬುದ್ಧಿಜೀವಿಗಳು, ವಿದ್ಯಾರ್ಥಿಗಳ ಉಪಸ್ಥಿತಿ
- ಹಲವು ರೀತಿಯ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಕಾರ್ಯಕ್ರಮಗಳು
- ಮೇಳದಲ್ಲಿ 3 ಲಕ್ಷಕ್ಕೂ ಹೆಚ್ಚು ನಾಗರಿಕರು ಭಾಗವಹಿಸಲಿದ್ದಾರೆ.
- ವಿದ್ಯಾರ್ಥಿಗಳಿಗಾಗಿ ವಿವಿಧ ದೇಸಿ ಆಟದ ಸ್ಪರ್ಧೆ– ನೂರಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳು ಭಾಗವಹಿಸಲಿವೆ.




### ಪೂರ್ವಭಾವಿ ಕಾರ್ಯಕ್ರಮಗಳು

- **ಪರಿಸರ ವಂದನಾ:** ನವೆಂಬರ್ 9ರಂದು ಪರಿಸರ ಸಂರಕ್ಷಣೆಯ ಜಾಗೃತಿಗಾಗಿ ‘ಪರಿಸರ ವಂದನಾ’ ಕಾರ್ಯಕ್ರಮ
- **ಗೋವಂದನಾ:** ದೇಸಿ ಹಸುಗಳ ಸಂರಕ್ಷಣೆಗಾಗಿ ನ. 12ರಂದು ‘ಗೋ ವಂದನಾ’ ಕಾರ್ಯಕ್ರಮ.
- **‘ಧರ್ಮ ರಸಪ್ರಶ್ನೆ’** : ದೇಶದ ಸಂಸ್ಕೃತಿ, ಸಂಪ್ರದಾಯಗಳನ್ನು ಜಾಗೃತಗೊಳಿಸುವ ಉದ್ದೇಶದಿಂದ ಶಾಲಾ ವಿದ್ಯಾರ್ಥಿಗಳಿಗಾಗಿ ಬೃಹತ್ ಆನ್–ಲೈನ್ ‘ಧರ್ಮ ರಸಪ್ರಶ್ನೆ’ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಸ್ಪರ್ಧೆಯಲ್ಲಿ ಈಗಾಗಲೇ 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು www.quiz.hssfbengaluru.in ಮೂಲಕ ಭಾಗವಹಿಸಿದ್ದಾರೆ. ಭಾಗವಹಿಸಲು ಕೊನೆಯ ದಿನಾಂಕ ನ. 14.

ಈ ಮೇಳವು ಹಿಂದೂ ಆಧ್ಯಾತ್ಮಿಕ, ಸೇವಾ ಸಂಘಟನೆಗಳಿಗೆ ತಮ್ಮ ಸೇವಾಚಟುವಟಿಕೆಗಳನ್ನು ಹಂಚಿಕೊಳ್ಳಲು ಒಂದು ಉತ್ತಮ ವೇದಿಕೆ ನೀಡುವುದಲ್ಲದೇ, ಜನಸಾಮಾನ್ಯರೂ ಸೇವಾ ಕಾರ್ಯಗಳಲ್ಲಿ ಭಾಗವಹಿಸಲು, ಸಾಮಾಜಿಕ ಪರಿವರ್ತನೆಯಲ್ಲಿ ತೊಡಗಿಕೊಳ್ಳಲು ಸಹಕಾರಿಯಾಗಲಿದೆ.

**ಹೆಚ್ಚಿನ ವಿವರಗಳಿಗಾಗಿ:** www.hssfbengaluru.in ಅಥವಾ 8971422566 arakalivp@gmail.com (ಅರಕಲಿ ವೆಂಕಟೇಶ್, ಸಂಯೋಜಕರು, HSSF)

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಮೊ: 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.